# ಮಹಾಜ್ಞಾನಿ ಚನ್ನಬಸವಣ್ಣ

◆ ಡಾ॥ ಸಿ.ಎಸ್. ಕಣಬರಗಿಮಠ

ಭಾರತವು ಬಹು ವರ್ಣಮಯ ದೇಶ. ಈ ದೇಶದಲ್ಲಿರುವಷ್ಟು ಜಾತಿ ಮತ ಪಂಥ ಪಂಗಡಗಳು ಮತ್ತಾವ ದೇಶದಲ್ಲಿಯೂ ಇಲ್ಲ. ಧರ್ಮ, ಸಿದ್ಧಾಂತ, ಸಂಸ್ಕೃತಿ, ಆಚಾರ, ವಿಚಾರಗಳಲ್ಲಿಯೂ ಸಾಕಷ್ಟು ವೈವಿಧ್ಯತೆ, ಭಿನ್ನತೆಯನ್ನು ಕಾಣುತ್ತೇವೆ. ಇದು ಸಾವಿರಾರು ವರುಷಗಳಿಂದ ಸಾಗಿ ಬಂದ ಸತ್ಯಕಥೆ.

ಆಗಾಗ ನಡೆಯುವ ವರ್ಣದ್ವೇಷ, ಉಚ್ಚನೀಚರೆಂಬ ತಾರತಮ್ಯ, ಮೇಲುಕೀಳೆಂಬ ಅಮಾನವೀಯ ಸಂಘರ್ಷಗಳೊಂದಿಗೆ, ಇಲ್ಲದವರು ಉಳ್ಳವರೆಂಬ ಭೇದಭಾವ ಹೆಚ್ಚಾಗಿ, ಅಧರ್ಮವು ಅಬ್ಬರಿಸಿದಾಗ ಭೂಮಿಯ ಮೇಲೆ ಅನೇಕ ಮಹಾತ್ಮರು ಕಾರಣಿಕರು ಜನ್ಮವೆತ್ತಿ ಲೋಕೋದ್ಧಾರ ಮಾಡಿ ಮಾನವ ಕುಲಕೋಟಿ ಮಾನ್ಯರಾಗಿದ್ದಾರೆ. ಭಾರತವು ಸಿದ್ಧಪುರುಷರ ನಾಡು, ಪುಣ್ಯಪುರುಷರ ಬೀಡು. ಇಲ್ಲಿ ಅನಾದಿ ಕಾಲದಿಂದಲೂ ಋಷಿಗಳು ಮುನಿಗಳು ಯೋಗಿಗಳು ತ್ಯಾಗಿಗಳು ಅವತರಿಸಿ ತಮ್ಮ ತ್ಯಾಗ ಬಲಿದಾನಗಳಿಂದ ಇಲ್ಲಿಯ ನೆಲ, ಜಲವನ್ನು ಪಾವನಗೊಳಿಸಿದ್ದುಂಟು.

ವೀರಶೈವ ಧರ್ಮದ ತತ್ವಗಳು ಅನುಷ್ಠಾನಪ್ರಧಾನ. ನುಡಿಯೇ ನಡೆ. ನಡೆಯೇ ನುಡಿ. ಅದೇ ಕಡೆ. ಅಷ್ಟಾವರಣಗಳೇ ಅಂಗವಾಗಿ, ಪಂಚಾಚಾರಗಳೇ ಪ್ರಾಣವಾಗಿ, ಷಟ್‌ಸ್ಥಲದಲ್ಲಿ ನಿಂತು, ಶಿರಬಾಗಿ ಕರಮುಗಿದು, ಇವ ನಮ್ಮವ ಇವ ನಮ್ಮವನೆಂದು ಅಪ್ಪಿಕೊಂಡು, ಲೌಕಿಕರೊಂದಿಗೆ ಬೆರೆತು, ಪಾರಲೌಕಿಕದ ಇರವಿನ ಅರಿವಿನೊಂದಿಗೆ ಸಾಗಿದ ಶರಣರಲ್ಲಿ ಚನ್ನಬಸವಣ್ಣನವರು ಪ್ರಾತಃಸ್ಮರಣೀಯರು.

ಸಿಂಗಿರಾಜ ಪುರಾಣದಲ್ಲಿ ವಿವರಿಸಿರುವಂತೆ ಬಸವಣ್ಣನವರ ಮಹಾಮನೆಯ ಹಣಕಾಸಿನ ವ್ಯವಹಾರ ನೋಡಿಕೊಳ್ಳುತ್ತಿದ್ದ ಶಿವಸ್ವಾಮಿಯು ಚನ್ನಬಸವಣ್ಣನ ತಂದೆ. ತಾಯಿ ಅಕ್ಕನಾಗಮ್ಮನ ಮೂಲಸ್ಥಳ ಬಿಜಾಪುರ ಜಿಲ್ಲೆಯ ಇಂಗಳೇಶ್ವರವಾದರೂ ಚನ್ನಬಸವಣ್ಣ ಹುಟ್ಟಿದುದು ಕೂಡಲಸಂಗಮ ಕ್ಷೇತ್ರದಲ್ಲಿ ಕ್ರಿ.ಶ. ೧೧೪೩ರಲ್ಲಿ. ಕಾರಣವೆಂದರೆ ಸೋದರಮಾವನಾದ ಬಸವಣ್ಣ, ತಾಯಿ ನಾಗಲಾಂಬಿಕೆಯರ (ಅಕ್ಕ ನಾಗಮ್ಮನ) ಕ್ರಾಂತಿಕಾರಿ ವಿಚಾರಗಳಿಂದಾಗಿ ಉಭಯರೂ ಸಂಪ್ರದಾಯಸ್ಥ ತಂದೆಯಾದ ಬಾಗೇವಾಡಿಯ ಮಾದರಸರಿಂದ ಬಹಿಷ್ಕರಿಸಲ್ಪಟ್ಟು ಕೂಡಲಸಂಗಮದಲ್ಲಿ ನೆಲೆಸಿದ್ದರು.

ಕೂಡಲಸಂಗಮದ ಪರಿಸರ, ಜಾತವೇದ ಮುನಿಗಳ ಸಾನ್ನಿಧ್ಯ, ಸೋದರಮಾವನಾದ ಬಸವಣ್ಣನವರ ತರಬೇತಿ, ತಾಯಿ ಅಕ್ಕನಾಗಮ್ಮನ ಆಧ್ಯಾತ್ಮಿಕ ವಿಚಾರಗಳು ಚನ್ನಬಸವಣ್ಣನನ್ನು ಬಹುಬೇಗ ಜ್ಞಾನಪಿಪಾಸುವನ್ನಾಗಿ ಮಾಡಿದವು. ಚನ್ನಬಸವಣ್ಣ ಕೂಡಲಸಂಗಮದಲ್ಲಿ ಇದ್ದುದು ಕೇವಲ ೧೨ ವರುಷ ಮಾತ್ರ. ಅಷ್ಟರಲ್ಲಿ ೬ರ ಜ್ಞಾನಾನುಭವ ಪಡೆದಿದ್ದ. ಅವನ ಜ್ಞಾನಕ್ಕೆ ಬಸವಣ್ಣ ಆಶ್ಚರ್ಯಚಕಿತನಾಗಿ ಹೇಳಿದ್ದಾನೆ: "ಇಂದು ಹುಟ್ಟಿದ ಕೂಸಿಂಗೆ ಇಂದೇ ಜೀವನವಾಯಿತ್ತು. ಆ ಕೂಸು ಬೀದಿಯಲ್ಲಿ ಬತ್ತೆಗೊಳ್ಳಲು ನಿಂದಿತ್ತಯ್ಯ. ಇದರ ಸಂಗಸುಖದನುಭವವನ್ನು ಕೂಡಲಸಂಗಮದೇವ ತಾನೇ ಬಲ್ಲ." ಪುಣ್ಯಪುರುಷರು ಸಮಾಜದ ಸುಧಾರಣೆಗಾಗಿ ಮಾಡುವ ತಮ್ಮ ತ್ಯಾಗ ಬಲಿದಾನಗಳಿಂದ ಅಲ್ಪಾಯುಷಿಗಳಾಗುತ್ತಾರೆ. ಸ್ವಾಮಿ ವಿವೇಕಾನಂದರು ಬದುಕಿದ್ದು ಕೇವಲ ೩೯ ವರುಷಗಳು. ಬಸವಣ್ಣ ಬದುಕಿದ್ದು ೩೬ ವರುಷವಾದರೆ, ಚನ್ನಬಸವಣ್ಣ ಬಾಳಿದುದು ಕೇವಲ ೨೪ ವರುಷ ಮಾತ್ರ. ಆದರೂ ಚನ್ನಬಸವಣ್ಣ ಬಿಟ್ಟುಹೋದ ವಚನಸಾಹಿತ್ಯ ಅಪಾರ.



ಚನ್ನಬಸವಣ್ಣ

ಚನ್ನಬಸವಣ್ಣ ಮಹಾಜ್ಞಾನಿಯಾದರೂ ಮಹಾ ಮೌನಿ. ಮಾತನಾಡಲೇಬೇಕು ಎಂದಾಗ ಮಾತ್ರ ಮಾತನಾಡುವನು. ಆದರೂ ಸಹ ಈಗಿರುವ ಶರಣರ ವಚನ ಸಾಹಿತ್ಯದಲ್ಲಿ ದೊರೆತಿರುವ ವಚನಗಳಲ್ಲಿ ಚನ್ನಬಸವಣ್ಣನ ವಚನಗಳೇ ಅಧಿಕ ಸಂಖ್ಯೆಯಲ್ಲಿವೆ.

ಲೇಖಕರು ಬೆಂಗಳೂರಿನವರು. ಹಲವಾರು ಪ್ರಮುಖ ರಾಷ್ಟ್ರೀಯ ಸಂಸ್ಥೆಗಳಲ್ಲಿ ಉನ್ನತ ಹುದ್ದೆಯಲ್ಲಿದ್ದು ರಾಷ್ಟ್ರಪತಿಗಳಿಂದ ಪುರಸ್ಕೃತರೂ ಆಗಿದ್ದಾರೆ. ಪ್ರಕೃತಿ ಚಿಕಿತ್ಸಾ ಅಭ್ಯಾಸ ಮಾಡುತ್ತಿದ್ದಾರೆ.

ಚನ್ನಬಸವಣ್ಣನ ಮಾತುಗಳೂ ಕೂಡ ಬಲು ಸೂಕ್ಷ್ಮ. ಒಮ್ಮೆ ಅಲ್ಲಮಪ್ರಭುದೇವರು ಕರ್ಮಯೋಗಿ ಸಿದ್ಧರಾಮೇಶ್ವರರನ್ನು ಪ್ರಥಮ ಬಾರಿಗೆ ಕಲ್ಯಾಣದ ಮಹಾಮನೆಗೆ ಕರೆದುಕೊಂಡು ಬಂದಾಗ, ಬಸವಣ್ಣ ಅವರನ್ನು ಇದಿರುಗೊಳ್ಳಲು ಹೋಗಲಿಲ್ಲ. ಲಿಂಗಪೂಜೆಯಲ್ಲಿ ಮಗ್ನರಾಗಿದ್ದರು. ಬಸವಣ್ಣನವರ ಆಪ್ತ ಕಾರ್ಯದರ್ಶಿ ಹಡಪದ ಅಪ್ಪಣ್ಣನು ಹೋಗಿ ಸ್ವಾಗತಿಸಿದರೂ ಪ್ರಭುದೇವರು ಒಳಗೆ ಬರಲಿಲ್ಲ. ಅಷ್ಟರಲ್ಲಿ ಬಸವಣ್ಣನವರ ಲಿಂಗ ಪೂಜೆ ಮುಗಿದಿತ್ತು. ಹಡಪದ ಅಪ್ಪಣ್ಣನು ನಡೆದ ವಿಷಯವನ್ನು ಬಸವಣ್ಣನವರಿಗೆ ತಿಳಿಸಿ ಪ್ರಭುದೇವರನ್ನು ಕರೆಯಲು ವಿನಂತಿಸಿ ಕೊಂಡ. ಅದಕ್ಕೆ, "ತನ್ನದೆನ್ನುವ ತನುಮನಧನವೆಲ್ಲ ಶಿವಶರಣರ ಸೇವೆಗೆ ಅರ್ಪಿತವಾದಾಗ, ತಮ್ಮ ಮನೆಗೆ ತಾವು ಬರಲು ಶರಣರಿಗೆ ಸ್ವಾಗತದ ಉಪಚಾರವೇಕೆ?" ಎಂಬುದು ಬಸವಣ್ಣನವರ ಅಭಿಮತ. ಪ್ರಭುದೇವರಿಗೆ ಸಹನೆ ಮೀರುತ್ತಿದೆ. ಪ್ರಭುದೇವರನ್ನು ಎದುರು ಗೊಳ್ಳಲು ಹೋಗಬೇಕಾದದ್ದು ಬಸವಣ್ಣನ ಕರ್ತವ್ಯ ಎಂದು

ದಿನನಿತ್ಯ ಒಂದು ಲಕ್ಷ ತೊಂಬತ್ತಾರು ಸಾವಿರ ಅಮರ ಗಣಂಗಳಿಗೆ ಭೋಜನ ಮಾಡಿಸುತ್ತಿದ್ದೇನೆ ಎಂಬ ಅಹಂಕಾರ ಬರುತ್ತದೆ. ಆಗ ಅಲ್ಲಮಪ್ರಭುಗಳು, "ನೀನು ನನಗೊಬ್ಬನಿಗೇ ಮಾತ್ರ ತೃಪ್ತಿಯಾಗಿ ಊಟ ಹಾಕಿದರೆ ಸಾಕು" ಎಂದು ಸವಾಲು ಹಾಕಿ ಊಟಕ್ಕೆ ಕುಳಿತಾಗ ಮಹಾಮನೆಯಲ್ಲಿ ಮಾಡಿದ ಅಡುಗೆ ಸಾಲುವುದಿಲ್ಲ. ಬಸವಣ್ಣ ಗಾಬರಿಯಾಗುತ್ತಾನೆ. ಪ್ರಭುದೇವರ ಕೋಪ ಜಾಸ್ತಿಯಾಗುತ್ತದೆ. ಆಗ ಗಾಬರಿಯಿಂದ ಚನ್ನಬಸವಣ್ಣನೆಡೆಗೆ ನೋಡುತ್ತಾನೆ. ಆಗ ಚನ್ನಬಸವಣ್ಣ "ನೀವೇ ಬೋನ, ನಾನೇ ಮೇಲೋಗರ ಆಗಲೇ ಪ್ರಭುವಿಗೆ ತೃಪ್ತಿ" ಎಂದು ತಮಾಷೆಯಿಂದ ಸಲಹೆ ಕೊಟ್ಟು, ಬಸವಣ್ಣನನ್ನು ಪಾರು ಮಾಡುತ್ತಾನೆ.

ಷಟ್‌ಸ್ಥಲ ಧರ್ಮವನ್ನು ಅರ್ಥಾತ್ ವೀರಶೈವ ಧರ್ಮವನ್ನು ನೇರಗೊಳಿಸುವಲ್ಲಿ ಚನ್ನಬಸವಣ್ಣನವರು ವಹಿಸಿದ ಪಾತ್ರ ಅಮೋಘವಾದುದು. ಅಂದಿನ ಶರಣರ ವಚನಸಾಹಿತ್ಯ ಉಳಿದದ್ದು ಚನ್ನಬಸವಣ್ಣನಿಂದಲೇ. ಭಕ್ತಿಯ ಆವೇಶದಲ್ಲಿ ಬಸವಣ್ಣ

ಸಕಲ ಪ್ರಪಂಚ ಜ್ಞಾನವರೆಮ, ಶಿವಜ್ಞಾನ ಸಂಪನ್ನನಾಗಿರಬಲ್ಲೆತೆ
ಅಷ್ಟಮ ಪುಷ್ಪ
ಇಂತೀ ಅಷ್ಟದಳ ಕುಸುಮಂಗಳ (ಸಹಜದಲ್ಲಿ ಅರಳಿಸಿ)
ಹೃದಯಕಮಲದಲ್ಲಿ ಅರಳಿಸಿ
ಸಹಜ ಪೂಜೆಯ ಮಾಡಬಲ್ಲ ಶರಣರು ನಿಮ್ಮ
ಪ್ರತಿಬಿಂಬದಂತಿಪ್ಪರು ಕಾಣಾ ಕೂಡಲ ಚನ್ನಸಂಗಮ ದೇವಾ

ನಮ್ಮ ಅಂತರಂಗದಲ್ಲಿ ಈ ಎಂಟು ಗುಣಗಳೆನ್ನುವಂತಹ ಹೂವು ಅರಳಬೇಕು. ಈ ಹೂವು ಅರಳಬೇಕಾದರೆ, ನಮ್ಮ ಸ್ವಾರ್ಥ, ದುರಹಂಕಾರ, ದುರ್ಗುಣಗಳೆಲ್ಲ ದೂರ ಆಗಬೇಕು. ಈ ಸಹಜವಾದ ಗುಣಗಳು ಹೃದಯದಲ್ಲಿ ಅರಳಿದಾಗ ಅದರ ಸುಗಂಧವನ್ನು ಭಗವಂತ ಸ್ವತಃ ಬಂದು ಸ್ವೀಕರಿಸುತ್ತಾನೆ. ಈ ಎಂಟು ಪುಷ್ಪಗಳು ಯಾವ ಮನುಷ್ಯನಲ್ಲಿವೆಯೋ ಅವನೇ ದೇವರು. ಅಂತಹ ವ್ಯಕ್ತಿಯನ್ನು ಆದರ್ಶವಾಗಿಟ್ಟುಕೋ, ಅವನನ್ನೇ ಪೂಜಿಸು. ಲಿಂಗ ಪೂಜೆಗಿಂತ ಜಂಗಮ ಪೂಜೆ ಶ್ರೇಷ್ಠವೆಂದು ಹೇಳಿದ್ದಾನೆ:

ಲಿಂಗಾರ್ಚನೆಯ ಮಾಡುವೆನಯ್ಯಾ
ಜಂಗಮವು ಮನೆಗೆ ಬರಬೇಕೆಂದು
ಜಂಗಮವು ಬಂದರೆ, ಲಿಂಗಾರ್ಚನೆಯ ಬಿಟ್ಟು
ಜಂಗಮಾರ್ಚನೆಯ ಮಾಡುವೆನಯ್ಯಾ
ಲಿಂಗದಲ್ಲೇನುಂಟು? ಜಂಗಮದಲ್ಲೇನುಂಟು ಎಂದರೆ,
ಲಿಂಗದಲ್ಲಿ ಕುಲವುಂಟು, ಛಲವುಂಟು, ಪದ ಉಂಟು,
ಫಲ ಉಂಟು, ಭಯ ಉಂಟು
ಆ ಜಂಗಮದಲ್ಲಿ ಕುಲಂ ನಾಸ್ತಿ, ಛಲಂ ನಾಸ್ತಿ, ಫಲಂ ನಾಸ್ತಿ,
ಪದಂ ನಾಸ್ತಿ, ಭಯಂ ನಾಸ್ತಿ.
ಇದು ಕಾರಣ ನಮ್ಮ ಬಸವಣ್ಣನು
ಜಂಗಮವೇ ಲಿಂಗವೆಂದು ನಂಬಿ
ಸ್ವಯಂ ಲಿಂಗವಾದ ಕಾಣಾ ಕೂಡಲ ಚನ್ನ ಸಂಗಮದೇವಾ

ಶಿವಭಕ್ತನ ಲಕ್ಷಣಗಳು ಹೇಗೆ ಇರಬೇಕೆಂಬುದಕ್ಕೆ ಒಂದೆಡೆ ಹೇಳುತ್ತಾರೆ :

ಶಿವಭಕ್ತಿ ಉಳ್ಳವಂಗೆ ಕಾಮ ಬೇಡ, ಕ್ರೋಧ ಬೇಡ,
ಲೋಭ ಬೇಡ,
ಮೋಹ ಬೇಡ, ಮದ ಬೇಡ, ಮತ್ಸರ ಬೇಡ.
ಶಿವಭಕ್ತಿ ಉಳ್ಳವಂಗೆ ಕಾಮ ಬೇಕು,
ಕ್ರೋಧ ಬೇಕು, ಲೋಭ ಬೇಕು,
ಮೋಹ ಬೇಕು, ಮದ ಬೇಕು, ಮತ್ಸರ ಬೇಕು.

ಬೇಕೆಂಬುದಕ್ಕೆ ಆವ ಗುಣ?

ಕಾಮ ಬೇಕು ಲಿಂಗದಲ್ಲಿ, ಕ್ರೋಧ ಬೇಕು ಕರಣಂಗಳಲ್ಲಿ
ಲೋಭ ಬೇಕು ಪಾದೋದಕ ಪ್ರಸಾದದಲ್ಲಿ
ಮೋಹ ಬೇಕು ಗುರುಲಿಂಗ ಜಂಗಮರಲ್ಲಿ
ಮದ ಬೇಕು ಶಿವಾಚಾರ ಘನವೆಂಬಲ್ಲಿ
ಮತ್ಸರ ಬೇಕು ಹೊನ್ನು, ಹೆಣ್ಣು, ಮಣ್ಣಿನಲ್ಲಿ
ಇಂತೋ ಸದ್ಗುಣವಿರಬೇಕು.

ಬೇಡವೆಂಬುದಕ್ಕೆ ಆವ ಗುಣ?

ಕಾಮ ಬೇಡ ಪರಸ್ತ್ರೀಯರಲ್ಲಿ
ಕ್ರೋಧ ಬೇಡ ಗುರುವಿನಲ್ಲಿ
ಲೋಭ ಬೇಡ ತನುಮನದಲ್ಲಿ
ಮೋಹ ಬೇಡ ಸಂಸಾರದಲ್ಲಿ
ಮದ ಬೇಡ ಶಿವಭಕ್ತರಲ್ಲಿ
ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ
ಇಂತೀ ಷಡ್ವಿಧ ಗುಣವನರಿತು ಮೆರೆಯಬಲ್ಲೆಡೆ ಆತನೇ
ಸದ್ಭಕ್ತ ಕಾಣಾ ಕೂಡಲ ಚನ್ನ ಸಂಗಮದೇವಾ

ಕಾಮವನ್ನು ನಿಗ್ರಹಿಸಿ ಅದನ್ನು ಭಗವಂತನೆಡೆಗೆ ತಿರುಗಿಸುವುದು ಉತ್ತಮ. ಬಯಸಿದರೆ ಶಿವನನ್ನೇ ಬಯಸುವೆ ಎಂಬುದು ಈ ಭಾವನೆ. ಮೋಕ್ಷದ ದಾರಿಯ ತೋರುವ ಗುರುವಿನ ಮೇಲೆ ಸಿಟ್ಟಾದರೆ ಯಾವ ಸದ್ಗತಿಯನ್ನೂ ಹೊಂದಲಾರೆವು. ನರಜನ್ಮವ ತೊಡೆದು, ಹರಜನ್ಮವ ಮಾಡಿದ ಗುರುವಿನ ಮೇಲೆ ಕೋಪಿಸಿಕೊಂಡರೆ ಅದು ಮಹಾಪರಾಧ. ಆ ಕ್ರೋಧವನ್ನು ಇಂದ್ರಿಯಗಳ ಮೇಲೆ ತೋರಿಸಿ ಉಪಟಳ ಕೊಡುವ ಅವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಲೋಭ ಬೇಡ ತನುಮನದಲ್ಲಿ, ಲೋಭ ಬೇಕು ಪಾದೋದಕ ಪ್ರಸಾದದಲ್ಲಿ. ತನುಮನಧನಗಳನ್ನು ಉದಾರ ಭಾವನೆಯಿಂದ ಗುರುಲಿಂಗ ಜಂಗಮಕ್ಕೆ ನೀಡಿ ಕೃತಾರ್ಥರಾಗಬೇಕು. ಅಲ್ಲಿ ಲೋಭಿತನ ಮಾಡಿದರೆ ಯಾವ ಪ್ರಗತಿಯೂ ಸಾಧ್ಯವಿಲ್ಲ. ಜಂಗಮರ ಪಾದೋದಕ ಪ್ರಸಾದವನ್ನು ತೆಗೆದುಕೊಳ್ಳುವಾಗ ಲೋಭಿಯಾಗಬೇಕು. ಸಂಸಾರದಲ್ಲಿ ಮೋಹಗೊಂಡರೆ ಅಧ್ಯಾತ್ಮವು ಸಾಧ್ಯವಾಗದು, ಸಮಾಜಸೇವೆಯೂ ಸಾಧ್ಯವಿಲ್ಲ. ಸಂಸಾರದಲ್ಲಿ ನೀವಿದ್ದರೂ, ನಿಮ್ಮಲ್ಲಿ ಸಂಸಾರವಿರಬಾರದು. ನೀರಿನಲ್ಲಿ ದೋಣಿ ಇದ್ದರೆ ಅಪಾಯವಿಲ್ಲ, ದೋಣಿಯಲ್ಲಿ ನೀರಿದ್ದರೆ ಅಪಾಯ ಎನ್ನುತ್ತಾರೆ ಪರಮಹಂಸರು. ಸಂಸಾರದಲ್ಲಿರುವ ಸ್ವಾರ್ಥಸಹಿತ ಮೋಹ, ಪರಿಶುದ್ಧವಾಗಿ ಗುರುಲಿಂಗ ಜಂಗಮರಲ್ಲಿ, ನಿಃಸ್ವಾರ್ಥ ಪ್ರೇಮವಾಗಿ ರೂಪುಗೊಳ್ಳಬೇಕು. ದೇಹಸಂಬಂಧದವರನ್ನು ಪ್ರೀತಿಸುವುದು ಮೋಹ, ದೈವೀ ಸಂಬಂಧದವರನ್ನು ಪ್ರೀತಿಸುವುದು ಪ್ರೇಮ. ಮದ ಬೇಡ ಶಿವಭಕ್ತರಲ್ಲಿ, ಮದ ಬೇಕು ಶಿವಾಚಾರ ಘನವೆಂಬಲ್ಲಿ; ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಭಾವನೆ ತಾಳಬೇಕು. ಶಿವಭಕ್ತರಲ್ಲಿ ಎಂದೂ ಗರ್ವ ಮಾಡಬಾರದು. ತನ್ನ ಧರ್ಮದ ಬಗ್ಗೆ ಪ್ರತಿಯೊಬ್ಬನಿಗೂ ಅಭಿಮಾನವಿರಬೇಕು. ಆದರೆ ದುರಭಿಮಾನ ಸಲ್ಲದು. ಧಾರ್ಮಿಕ ದುರಭಿಮಾನದಿಂದ ದೂರವಿರಬೇಕು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಶರಣನು ಯಾವ ಪ್ರಾಣಿಯಲ್ಲಿಯೂ ಅಸೂಯೆ ಭಾವನೆ ತಾಳಬಾರದು. ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿ ಆತಂಕ ತರುವ ಹೊನ್ನು, ಹೆಣ್ಣು, ಮಣ್ಣಿನಲ್ಲಿ ಮತ್ಸರ ಇರಬೇಕು.

ಭಕ್ತರಂತೆ ಶರಣರಂತೆ ವೇಷ ತೊಟ್ಟು, ಆಷಾಢಭೂತಿಗಳಾಗಿ

ಮೆರೆಯುವ ಡಾಂಭಿಕರೇ ಹೆಚ್ಚು. ಶರಣನಾಗುವುದು ಸುಲಭಸಾಧ್ಯವಲ್ಲ. ಬಹಳ ಕಠಿಣ. ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ ಎಂದು ಚನ್ನಬಸವಣ್ಣ ೧೨ನೆಯ ಶತಮಾನದಲ್ಲಿಯೇ ಹೇಳಿದ್ದಾನೆ.

ಇನ್ನೊಂದೆಡೆ ಜನರ ಮನಸ್ಸು ಹೇಗೆ ಎಂಬುದನ್ನು ತೋರಿಸಿದ್ದಾನೆ:

ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣನ, ಲೋಕದ
ಸಂಸಾರಿಗಳೆಂತು ಮೆಚ್ಚುವರಯ್ಯಾ? ಊರೊಳಗಿರ್ದಡೆ
ಉಪಾಧಿಕನೆಂಬರು, ಅಡವಿಯೊಳಗಿರ್ದಡೆ ಮೃಗವೆಂಬರು
ಹೊನ್ನ ಬಿಟ್ಟಡೆ ದರಿದ್ರನೆಂಬರು, ಹೆಣ್ಣ ಬಿಟ್ಟಡೆ
ನಪುಂಸಕನೆಂಬರು
ಮಣ್ಣ ಬಿಟ್ಟಡೆ ಪೂರ್ವಕರ್ಮಿಯೆಂಬರು, ಮಾತನಾಡಿದಡೆ,
ಜ್ಞಾನಿಗೇಕಯ್ಯಾ ಮಾತೆಂಬರು, ಮಾತನಾಡದಿರ್ದಡೆ
ಮೂಗನೆಂಬರು
ನಿಜವ ನುಡಿದಡೆ ನಿಷ್ಠುರಿ ಎಂಬರು, ಸಮತೆಯ ನುಡಿದಡೆ
ಅಂಜುವನೆಂಬರು. ಇದು ಕಾರಣ ಕೂಡಲಚನ್ನಸಂಗಯ್ಯಾ
ನಿಮ್ಮ ಶರಣ ಲೋಕದಿಚ್ಛೆಯಂತೆ ನುಡಿಯ,
ಲೋಕದಿಚ್ಛೆಯಂತೆ ನಡೆಯ ।

ಚನ್ನಬಸವಣ್ಣನಿಲ್ಲದಿದ್ದರೆ ಅನುಭವ ಮಂಟಪದ ಕಲಾಪ ಶೂನ್ಯವಾಗುತ್ತಿತ್ತು. ಕಲ್ಯಾಣದಲ್ಲಿ ಕ್ರಾಂತಿಯಾಗುವಾಗ ಇಡೀ ವಚನ ಸಾಹಿತ್ಯವೆ ನಾಶವಾಗುತ್ತಿತ್ತು. ಆಗ ಬಸವಣ್ಣ, ಚನ್ನಬಸವಣ್ಣನಿಗೆ "ಈ ವಚನ ಭಂಡಾರವನ್ನು ಜೋಪಾನವಾಗಿ ಕಾಯುವ ಭಾರ ನಿನ್ನದು. ಈ ವಚನ ಭಂಡಾರವನ್ನು ಎತ್ತಿಕೊಂಡು ಮೊದಲು ಇಲ್ಲಿಂದ ಎಲ್ಲಾದರೂ ಹೊರಟು ಹೋಗು" ಎಂದು ಆಜ್ಞಾಪಿಸುತ್ತಾನೆ. ಧರ್ಮಪತ್ನಿ ಗಂಗಾಂಬಿಕೆಗೆ "ಚನ್ನಬಸವನನ್ನು ಕಾಪಾಡುವ ಭಾರ ನಿನ್ನದು ಎಂದು" ಹೇಳುತ್ತಾನೆ. ಗಂಗಾಂಬಿಕೆಯೂ ಸಹ ವೀರಾಗ್ರಣಿ. ಬಲದೇವ ಮಂತ್ರಿಯ ಮಗಳಾಗಿದ್ದರಿಂದ ಕುದುರೆ ಸವಾರಿ, ಕತ್ತಿವರಸೆಯಲ್ಲಿ ಪ್ರವೀಣಳಾ ದ್ದಳು. ಮೂರುಸಾವಿರ ಶರಣರು ಬೆಂಗಾವಲಾಗಿ ಹೊರಟರು. ಮಡಿವಾಳ ಮಾಚಿದೇವರಿಗೆ "ಮಾಚಿದೇವರೇ, ಇವರೆಲ್ಲರ ರಕ್ಷಣೆ ತಮ್ಮ ಜವಾಬ್ದಾರಿ" ಎಂದು ಹೇಳಲು ಮಾಚಿದೇವರು ಬಿಚ್ಚುಗತ್ತಿಯನ್ನು ಝಳಪಿಸುತ್ತಾ ಸೇನಾಪತಿಯಾಗಿ ಹೊರಟರು. ಹಾಗೆಯೇ ಯುದ್ಧ ಮಾಡುತ್ತ ಮಾಡುತ್ತ ಚನ್ನಬಸವಣ್ಣ ಕಾರವಾರ-ದಾಂಡೇಲಿಯ ಸಮೀಪವಿರುವ ಉಳವಿಯಲ್ಲಿ ವಾಸ್ತವ್ಯ ಹೂಡಿದರು. ದಟ್ಟವಾದ ಭಯಾನಕವಾದ ಕಾಡಿನಲ್ಲಿ, ಗುಹೆಗಳಲ್ಲಿ, ವಚನ ಸಾಹಿತ್ಯದೊಂದಿಗೆ ಇದ್ದರು. ಕೊನೆಗೆ ಅಲ್ಲಿಯೇ ಲಿಂಗೈಕ್ಯವಾದರು. ಚನ್ನಬಸವಣ್ಣನ ಸಮಾಧಿ ಉಳವಿಯಲ್ಲಿಯೇ ಇದೆ. ಚನ್ನಬಸವಣ್ಣನಿಂದ ಇಂದು ಉಳವಿ ಪವಿತ್ರವಾದ ಯಾತ್ರಾಸ್ಥಳವಾಗಿದೆ.

✡

### ಕಾರ್ಯಸಿದ್ಧಿಗೆ ಬೇಕಾಗಿರುವುದು ಮನೋಧಾರ್ಢ್ಯ

ವಿಜೇತವ್ಯಾ ಲಂಕಾ ಚರಣತರಣೀಯೋ ಜಲನಿಧಿಃ
ವಿಪಕ್ಷಃ ಪೌಲಸ್ತ್ಯೋ ರಣಭುವಿಸಹಯಾಶ್ಚ ಕಪಯಃ |
ತಥಾಪ್ಯೇಕೋ ರಾಮಃ ಸಕಲಮವಧೀದ್ರಾಕ್ಷಸಕುಲಂ
ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ ||

ಜಯಿಸಬೇಕಾದದ್ದು ಲಂಕೆಯನ್ನು. ಸಮುದ್ರವನ್ನು ಕಾಲ್ನಡಗೆಯಿಂದ ದಾಟಬೇಕಾಗಿದೆ. ವೈರಿಯಾದರೋ ರಾವಣ. ರಣರಂಗದಲ್ಲಿ ಸಹಾಯಕರಾದರೋ ಕಪಿಗಳು ಹೀಗಿದ್ದರೂ ಒಬ್ಬನೇ ಶ್ರೀರಾಮನು ಸಮಸ್ತ ರಾಕ್ಷಸರನ್ನೂ ಸದೆ ಬಡಿದನು. ಮಹಾಪುರುಷರ ಕಾರ್ಯಸಿದ್ಧಿ ಅವರ ಮನೋಧಾರ್ಢ್ಯದಲ್ಲಿರುತ್ತದೆ. ಸಹಾಯಕ ಸಾಮಗ್ರಿಯಲ್ಲಲ್ಲ.

(ಆಧಾರ : ಭೋಜಪ್ರಬಂಧ)

### ಧೀರನಾರು?

ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ ।
ಧೀರರಾದವರು ನ್ಯಾಯವಾದ ದಾರಿಯಿಂದ ಒಂದು ಹೆಜ್ಜೆಯನ್ನೂ ಆಚೆ ಇಡುವುದಿಲ್ಲ.

(ಆಧಾರ : ನೀತಿಶತಕ, ಭರ್ತೃಹರಿ)

*Statement about ownership and other particulars about Viveka Prabha (according to Form IV Rule 8, circulated by Registrar of Newspapers for India).*

| | | |
|---|---|---|
| 1. Place of Publication | : | Mysore 570 020 |
| 2. Periodicity of Publication | : | Monthly |
| 3. Printer's Name | : | *J B Pattabhi* |
| Nationality | : | Indian |
| Address | : | Pattabi Enterprises<br>Ramavilasa Road<br>Mysore |
| 4. Publisher's Name | : | *Swami Atmavidananda* |
| Nationality | : | Indian |
| Address | : | Sri Ramakrishna<br>Ashrama, Yadavagiri,<br>Mysore 570 020 |
| 5. Editor's Name | : | *Swami Atmajnanananda* |
| Nationality | : | Indian |
| Address | : | Sri Ramakrishna<br>Ashrama, Yadavagiri,<br>Mysore 570 020 |
| 6. Name & Addresses of the individuals who own the newspaper and partners or share-holders holding more than 1% of the capital | : | Sri Ramakrishna<br>Ashrama, Yadavagiri<br>Mysore 570 020 |

I, Swami Atmavidananda, hereby declare that the particulars given above are true to the best of my knowledge and belief.

*Sd.*
*Swami Atmavidananda*
Signature of the Publisher

01.03.2005